# ೭ ಬೆಳಗಿನ ಹಾಡು!



ಕೂಗಿತು ಕೇಳಿ ಬೆಳಗಿನ ಕೋಳಿ
ಕೂ ಕೂ ಕೂ ಕೂ
ತೀಡಿತು ಏಳಿ ತಣ್ಣನೆ ಗಾಳಿ
ಭುಂ ಭುಂ ಭುಂ ಭುಂ ||೧||

ಹಕ್ಕಿಗಳೆಲ್ಲ ಗೂಡನು ಬಿಟ್ಟು
ಹಾರುತಲಿವೆ ಹೊರಗೆ
ಗಿಡ ಮರ ಶಿರವ ಬಾಗಿಸಿ ವರವ
ಬೇಡುತಲಿವೆ ಧರೆಗೆ! ||೨||

ಮುಗಿಲಿನ ಮನೆಗೆ ತೋರಣಕಟ್ಟಿ
ನಗುತಿವೆ ರವಿಕಿರಣ
ತಿಳಿಜಲ ಕೊಳಕೆ ಕಮಲಗಳೆಲ್ಲ
ತೊಡಿಸಿವೆ ಆಭರಣ ! ||೩||

ಸಾಲಿಗೆ ಸಾಲೆ ಮುತ್ತಿನ ಮಾಲೆ
ಇಬ್ಬನಿ ಹನಿಗಳಲಿ
ಹೊಸ ಹೊಸ ಬಣ್ಣ ತೆರೆದಿದೆ ಕಣ್ಣ
ಹನಿ ಹನಿ ನೀರಿನಲಿ ! ||೪||

ಹೂವಿನ ಗಂಧ ತೀಡುತ ಬಂದ
ಗಾಳಿಯೆ ಹಾಡುತಿದೆ;
ಅಳಿಗಳ ಹಿಂಡು ಬರುವುದ ಕಂಡು
ಮುಂದಕೆ ಓಡುತಿದೆ ! ||೫||

ದಾಟಲು ನಸುಕು ಮಂಜಿನ ಮುಸುಕು
ಸರಿಯುತಲಿದೆ ನೋಡು !
ಹೊಳೆಯುವ ಬಾನು ಹೇಳುವದೇನು ?
ಬೆಳಗಿನದೀ ಹಾಡು ! ||೬||

– ಬಿ.ಎ. ಸನದಿ

**ಶಬ್ದಗಳ ಅರ್ಥ:-**

ಶಿರ – ತಲೆ; ಧರೆ – ಭೂಮಿ; ಬಾನು – ಆಕಾಶ; ಆಭರಣ – ಒಡವೆ;

***ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.**

**ಅಳಿ ______ ; ಗಂಧ ______ ; ಇಬ್ಬನಿ ______**

## ಅಭ್ಯಾಸ

**ಪ್ರಶ್ನೆ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಬೆಳಗಿನಲ್ಲಿ ಏನು ಕೂಗಿತು ?

______

ಆ) ಹಕ್ಕಿಗಳು ಏನನ್ನು ಬಿಟ್ಟು ಹಾರುತ್ತಿದ್ದವು ?

______

ಇ) ಗಿಡಮರಗಳು ಶಿರಬಾಗಿಸಿ ಏನನ್ನು ಬೇಡುತ್ತಿದ್ದವು ?

______

**ಪ್ರಶ್ನೆ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

**ಅ)** ______

**ಉತ್ತರ** ______

**ಆ)** ______

**ಉತ್ತರ** ______

**ಪ್ರಶ್ನೆ೨) ಕೆಳಗಿನ ಕವಿತೆಯ ಸಾಲುಗಳನ್ನು ಪೂರ್ಣಮಾಡಿರಿ.**

ಹೂವಿನಗಂಧ ............

...............................

...............................

.............. ಓಡುತಿದೆ !

**ಉಪಕ್ರಮ :** ಈ ಕವಿತೆಯ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

## ಬೇಗ ಮಲಗಿ ಬೇಗ ಏಳು

